ವಿದ್ಯಾ ಸಂಸ್ಕಾರ್ ಪದವಿ ಪೂರ್ವ ಕಾಲೇಜು

Vidya Sanskaar Pre-University College

(Affiliated to Department of School Education, Pre-University)

Machohalli Gate, Magadi Main Road, Bengaluru – 560091

Ph: 080-35612881 to 99 (19 Lines) Email: upasana@vidyasanskaar.edu.in, www. vidyasanskaar.edu.in

**U-DISE Code:** 29280203925 **College Code:** AN0660


# UPASANA -ಉಪಾಸನ - उपासना


## VOLUME - 02 | ISSUE -02 | JULY 2026




# Meet Our Editorial Team...

Patrons:

1. H B Shyamsundar, Secretary, VSECT
2. M K Ramaswamy, Director (Academics), VSECT

Advisors:

1. Dr. Satish M Bejjihally, CEO, VSECT
2. Harshith Gowda S, EDL, VSECT

Core Members:

1. Vinay G V, Principal
2. Shilpa T, Coordinator (Com. & Lang.)

Members:

1. Bhavya M K, Lecturer in English
2. Gangaraju D, Lecturer in Kannada
3. Julio Sterlin J S, Lecturer in Computer Science
4. Rajesha H N, Lecturer in Hindi
5. Thippeswamy, Librarian
6. Lavanya B T, Lecturer in Business Studies
7. Rushika L, Lecturer in Business Studies
8. Bhoomika R M, FDA
9. Sushma, FDA

VOLUME - 02 | ISSUE -02 | JULY 2026

# Table of Contents


1. *Cultural Fest*

   *One Stage Many Dreams.*

2. *Small Switches, Massive Impact*

   *Serving the Energy Gap.*

3. *Green Today, Clean Tomorrow*

   *Plant Trees, Save Water, Protect Earth.*

4. *Digital Skills*

   *Tech Smart, Future Ready.*

5. *Time Management*

   *The Secret to Sucess.*

6. *Discipline*

   *Discipline Today, Sucess Tomorrow.*

7. *Gallery*

   *Moments Captured*

8. *Contact us*

VOLUME - 02 | ISSUE -02 | JULY 2026

# CULTURAL FEST : A CELEBRATION OF TALENT



Vidya Sanskaar Pre-University College transformed into a vibrant hub of art and culture as it hosted the much-awaited Cultural Fest 2026-2027 on Thursday, July 25, 2026, at the S.P.M Auditorium. The day-long, student-organized extravaganza commenced at 9:00 AM and witnessed enthusiastic participation from students of both 1st and 2nd PUC.

The programme, compered by Chaithra R. of 2nd P.U Commerce, opened on an auspicious note with the State anthem . This was followed by the ceremonial lighting of the lamp, by the distinguished guests, symbolizing the dispelling of ignorance.



In his keynote address, Academic Director Sri M.K. Ramaswamy emphasized the role of cultural activities in holistic education. Sri Harshith Gowda S. delivered an inspiring speech that resonated with the student audience. The event was graced by Dr. Satish M. Bejjihally, CEO; Sri Vinay G.V., Principal; and Smt. Shilpa T., Coordinator. The formal session concluded with a vote of thanks by Chaithra R., followed by the National Anthem.

**Inaugural session saw the stage come alive with a spectrum of performances:**

Dance: The audience was enthralled by electrifying group and solo performances from teams including Rock Stars, Team Evolve, Team Golden Wings, and Boom Blasters.

Ramp Walk: Creativity took center stage as 7 teams, including Team Coorg, Team Kodagu Bebagiyaru, Team Mafia, and Team Wave, showcased diverse themes with style and confidence.

Melody & Harmony: The auditorium echoed with music as group songs were presented by teams led by students od 2nd PUC



**Solo performances by were equally captivating.**



Theatrical Flair: Skits such as Sri Krishna Sandhana, Yamalokadalli, and Modern Maanavaru, performed by Team Raja Gambhirya and others, drew both laughter and applause.

The Cultural Fest 2026 was a resounding success, providing a powerful platform for students to exhibit their talents in dance, music, drama, and fashion. More than just an event, it was a testament to the team spirit, creativity, and rich cultural values nurtured at Vidya Sanskaar PU College.

VOLUME - 02 | ISSUE -02 | JULY 2026

# ವಿದ್ಯುತ್ ಕೊರತೆಯಾದರೆ ನಮ್ಮ ಪಾತ್ರವೇನು?

ಇಂದು ಹಳ್ಳಿಗೆ ಹೋಗಿ ಅಥವಾ ಪಟ್ಟಣಕ್ಕೆ ಹೋಗಿ, ನಾಗರಿಕ ಎದುರಿಸುತ್ತಿರುವ ಪ್ರಮುಖ ಸಮಸ್ಯೆ ಏನು ಎಂದು ವಿಚಾರಿಸಿದರೆ ಎಲ್ಲರೂ ಹೇಳುವ ಮೊದಲ ಸಮಸ್ಯೆಯೆಂದರೆ 'ವಿದ್ಯುತ್ ಕೊರತೆ' ಎಂದು ಖಂಡಿತವಾಗಿ ಹೇಳುತ್ತಾರೆ. ಈ ವಿದ್ಯುತ್ ಕೊರತೆ ಏಕೆ ಆಗಿದೆ? ಇದಕ್ಕೆ ಪರಿಹಾರ ಹುಡುಕುವಲ್ಲಿ ನಮ್ಮ ಪಾತ್ರವೇನು ಎಂಬುದರ ಅರಿವು ನಮಗಿರ ಬೇಕಾಗಿರುತ್ತದೆ.

ವಿದ್ಯುತ್ ಕೊರತೆ ಏಕೆ ಆಗಿದೆ? ಎಂಬ ಪ್ರಶ್ನೆ ಬಂದಾಗ ಜೊತೆಯಲ್ಲಿ ಕೆಲವು ವರ್ಷಗಳ ಹಿಂದೆ ಈ ಕೊರತೆ ಏಕಿರಲಿಲ್ಲ? ಈಗ ಮಾತ್ರ ಏಕೆ ಆಗುತ್ತಿದೆ? ಬೇರೆ ಬೇರೆ ದೇಶಗಳಲ್ಲಿ ಈ ಕೊರತೆಏಕಿಲ್ಲ? ಎಂಬುದರ ಬಗ್ಗೆಯು ನಾವು ತಿಳಿದುಕೊಳ್ಳಬೇಕಾಗುತ್ತದೆ.

ವಿದ್ಯುತ್ ಕೊರತೆ ಏಕೆ ಆಗಿದೆ? ಎಂದರೆ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಬಹಳ ಅಂತರವಿದೆ. ನಮ್ಮ ದೇಶದ ಜನ ಸಂಖ್ಯೆ ಬಹಳ ವೇಗದಲ್ಲಿ ಏರುತ್ತಿದೆ. ಈ ದೇಶದ ಜನ ಸಂಖ್ಯೆ 131 ಕೋಟಿಯಿದ್ದು, ಪ್ರತಿ ವರ್ಷ ಸರಿ ಸುಮಾರು ಶೇ.1.58 ರಷ್ಟು ಏರಿಕೆ ಆಗುತ್ತಿದೆ. ಈ ಜನ ಸಂಖ್ಯೆಯ ಏರಿಕೆಗೆ ಅನುಗುಣವಾಗಿ ವಿದ್ಯುತ್ ಉತ್ಪಾದನೆ ಆಗುತ್ತಿಲ್ಲ ಕಾರಣ ಹಲವಾರು ಜಲಾಧಾರಿತ ವಿದ್ಯುತ್ ಜನಕಗಳಿಗೆ ಮಳೆ ಕೊರತೆಯಿಂದ ಅಣೆಕಟ್ಟುಗಳು ಸಂಪೂರ್ಣವಾಗಿ ಭರ್ತಿಯಾಗದೆ ವರ್ಷ ಪೂರ್ತಿ ಜಲ ಪೂರೈಕೆ ಸಾಧ್ಯವಾಗದೆ ಇರುವುದು. ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ ಸ್ಥಾವರಗಳಿಗೆ ಉತ್ತಮ ಗುಣಮಟ್ಟದ ಕಲ್ಲಿದ್ದಲು ಸರಬರಾಜು ಆಗದೆ ಇರುವುದು, ಕಲ್ಲಿದ್ದಲು ಬೆಲೆ ವಿಪರೀತವಾಗಿರುವುದು ಜೊತೆಗೆ ತಾಂತ್ರಿಕ ತೊಂದರೆಯೆಂದು ಬಹಳಕಾಲ ಕಲ್ಲಿದ್ದಲು ಆಧಾರಿತ ವಿದ್ಯುಜನಕಗಳನ್ನು ಮುಚ್ಚುವುದು, ಸ್ವಾಭಾವಿಕ ಅನಿಲದ ದುರ್ಲಭತೆಯಿಂದ ರಾಜ್ಯದಲ್ಲಿ ಆವುಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಸ್ಥಾವರಗಳನ್ನು ಸ್ಥಾಪಿಸದೆ ಇರುವುದು. ಇವುಗಳು ನಮ್ಮ ರಾಜ್ಯದ ವಿದ್ಯುತ್ ಕೊರತೆಗೆ ಕೆಲವು ಕಾರಣವಾಗಿದೆ.

ಕೆಲವು ವರ್ಷಗಳ ಹಿಂದೆ ವಿದ್ಯುತ್ ಕೊರತೆ ಇರಲಿಲ್ಲ, ಕಾರಣ ಜನ ಸಂಖ್ಯೆಯೂ ಕಡಿಮೆ ಇತ್ತು, ಒಟ್ಟು ಬಳಕೆಯೂ ಕಡಿಮೆ ಇತ್ತು ಜೊತೆಗೆ ಈಗಿನ ಸರಾಸರಿ ಮಳೆ ಪ್ರಮಾಣವನ್ನು ಹತ್ತು ವರ್ಷಕ್ಕೆ ಹಿಂದಕ್ಕೆ ಹೋಲಿಸಿದರೆ ಆಗ ಸಮೃದ್ಧ ಮಳೆಯಾಗಿ ಕೆರೆಕಟ್ಟೆಗಳು ತುಂಬುತ್ತಿದ್ದವು. ನದಿಗಳು ತುಂಬಿ ಹರಿದು ಅಣೆಕಟ್ಟುಗಳು ಭರ್ತಿಯಾಗಿ ವರ್ಷ ಪೂರ್ತಿ ವಿದ್ಯುತ್ ಉತ್ಪಾದನೆಯಾಗುತ್ತಿತ್ತು. ಈಗ ವಾರ್ಷಿಕ ಸರಾಸರಿ ಮಳೆ ಪ್ರಮಾಣ ಕಡಿಮೆಯಾಗಿದ್ದು ಅಣೆಕಟ್ಟುಗಳು ಪೂರ್ಣ ಭರ್ತಿಯಾಗದೆ ಸ್ವಲ್ಪಭಾಗ ಖಾಲಿ ಉಳಿಯುತ್ತಿದ್ದು ಹಿಂದಿನ ಪ್ರಮಾಣದ ವಿದ್ಯುತ್ತನ್ನು ಜಲಾಧಾರಿತ ವಿದ್ಯುತ್ ಉತ್ಪಾದನಾ ಕ್ಷೇತ್ರಗಳಿಂದ ಪಡೆಯಲಾಗುತ್ತಿಲ್ಲ. ಮಳೆ ಕಡಿಮೆಯಾಗಲು ಕಾರಣ ಅರಣ್ಯನಾಶ, ಮಳೆಸುರಿಸುವ ಮೋಡಗಳನ್ನು ಆಕರ್ಷಿಸಿ ತಡೆಹಿಡಿಯುವ ಶಕ್ತಿಯಿರುವುದು ಎತ್ತರವಾದ ಮರಗಳನ್ನು ಹೊಂದಿರುವ ಅರಣ್ಯ ಪ್ರದೇಶಕ್ಕೆ ಈಗ ನಮ್ಮ ದೇಶದಲ್ಲಿ ಅರಣ್ಯ ಪ್ರದೇಶ ನಶಿಸಿ ಹೋಗುತ್ತಿರುವುದರಿಮದ ನದಿ ಮುಖಜ ಭೂಮಿಯಲ್ಲಿ ಮಳೆ ಕಡಿಮೆಯಾಗುತ್ತಿದೆ. ಆಣೆಕಟ್ಟುಗಳಲ್ಲಿ ಕೂಡ ಬಹಳ ವರ್ಷಗಳಿಂದ ಹೂಳು ತುಂಬಿರುವುದರಿಂದ ಹೆಚ್ಚು ನೀರು ತುಂಬಿಸಿಕೊಳ್ಳಲಾಗುತ್ತಿಲ್ಲ. ಹೊಸ ಹೊಸ ಅಣೆಕಟ್ಟನ್ನು ಕಟ್ಟಲು ಪರಿಸರ ವಾದಿಗಳು ಅರಣ್ಯ ನಾಶವಾಗುತ್ತದೆಂದು ವಿರೋಧಿಸುತ್ತಿದ್ದಾರೆ. ಈ ಮೇಲಿನ ಕಾರಣಗಳಿಂದ ಜಲಾಧಾರಿತ ವಿದ್ಯುತ್ ಜನಕದಿಂದ ಹೆಚ್ಚು ವಿದ್ಯುತ್ ಉತ್ಪಾದಿಸಲಾಗುತ್ತಿಲ್ಲ.

ಇನ್ನು ಕಲ್ಲಿದ್ದಲ್ಲನ್ನು ಉಪಯೋಗಿಸಿಕೊಂಡು ವಿದ್ಯುತ್ ಉತ್ಪಾದಿಸುವ ಉಷ್ಣ ವಿದ್ಯುತ್ ಸ್ಥಾವರಗಳ ಸಮಸ್ಯೆಗಳೇನೆಂದರೆ ಅವುಗಳನ್ನು ಕೂಡ ಸ್ಥಾಪಿಸಲು ಪರಿಸರವಾದಿಗಳು ಅವಕಾಶ ನೀಡುತ್ತಿಲ್ಲಕಾರಣ ಅವುಗಳಿಂದ ಬರುತ್ತಿರುವ ಆಗಾಧವಾದ ಧೂಮ ಮತ್ತು ಧೂಳು ಪರಿಸರ ಹಾಳು ಮಾಡುತ್ತಿದ್ದು, ಭೂಗೋಳದ ಉಷ್ಣತೆಯ ಏರಿಕೆಗೆ ಕಾರಣವಾಗುತ್ತಿದೆ. ಮತ್ತೊಂದು ಸಮಸ್ಯೆಯೆಂದರೆ ನಮ್ಮ ರಾಜ್ಯದಲ್ಲಿ ಕಲ್ಲಿದ್ದಲು ಕೊರತೆ ಇದ್ದು ಬಹಳ ದೂರದಿಂದ ಅಂದರೆ ತಮಿಳುನಾಡು, ಬಿಹಾರ, ಆಂಧ್ರಪ್ರದೇಶ ಮುಂತಾದ ಕಡೆಯಿಂದ ಖರೀದಿಸಿ ಸಾಗಾಣಿಕೆ ಮಾಡಬೇಕಾಗಿರುವುದರಿಂದ ದುಬಾರಿ ಸಾಗಾಣಿಕೆ ಖರ್ಚು ಬರುತ್ತಿದೆ ಮತ್ತು ದೊರೆಯುವ ಕಲ್ಲಿದ್ದಲೂ ಕೂಡ ಉತ್ಕೃಷ್ಟತೆಯಲ್ಲಿ ಬಹಳ ಕೀಳು ಮಟ್ಟದ್ದು ಎಂದು ಪರಿಗಣಿಸಲಾಗುತ್ತದೆ. ರಾಯಚೂರಿನಲ್ಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿದ್ದು ಅವು ಆಗಾಗ್ಗೆ ತಾಂತ್ರಿಕ ದೋಷದಿಂದ ಕೆಟ್ಟುನಿಲ್ಲುತ್ತವೆ. ಇತ್ತೀಚಿಗೆ ರಾಯಚೂರು ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದ ಬಂದ ಅನಿರೀಕ್ಷಿತ ಪ್ರವಾಹ ಈ ಉಷ್ಣ ವಿದ್ಯುತ್ ಕೇಂದ್ರಗಳಿಗೆ ನುಗ್ಗಿ ಬಹಳಷ್ಟು ಹಾನಿ ಉಂಟು ಮಾಡಿದ್ದು ಅವು ಇನ್ನು ಕೆಲವು ರಿಪೇರಿ ಹಂತದಲ್ಲಿದೆ. ಬೇಸಿಗೆ ಕಾಲದಲ್ಲಿ ಇವು ಸತತವಾಗಿ ಕೆಲಸ ಮಾಡುವುದರಿಂದ ಹೆಚ್ಚು ತಾಂತ್ರಿಕ ದೋಷ ಉಂಟಾಗುತ್ತವೆ. ನಮ್ಮಲ್ಲಿ ಬಳಕೆಯಾಗುತ್ತಿರುವ ವಿದ್ಯುತ್ ಬಹುತೇಕ ಜಲಾಗಾರಗಳಿಂದ ಬರುತ್ತಿದ್ದು, ಇವು ಬೇಸಿಗೆ ಕಾಲದಲ್ಲಿ ಬರಿದಾಗುವುದರಿಂದ ಉಷ್ಣ ವಿದ್ಯುತ್ ಸ್ಥಾವರಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಇವೂ ಕೂಡ ಮೇಲಿನ ಸಮಸ್ಯೆಗಳಿಂದ ನಿರಂತರ ವಿದ್ಯುತ್ ಪೂರೈಸಲಾಗದೆ ರಾಜ್ಯದಲ್ಲಿ ಕಗ್ಗತ್ತಲೆ ಆವರಿಸುವುದು ಅನಿವಾರ್ಯವಾಗಿದೆ.

# ವಿದ್ಯುತ್ ಕೊರತೆಯಾದರೆ ನಮ್ಮ ಪಾತ್ರವೇನು?

ಇನ್ನು ಪರಮಾಣು ವಿದ್ಯುತ್ ಶಕ್ತಿ ಕೇಂದ್ರಗಳಿಂದ ಬರುತ್ತಿರುವ ವಿದ್ಯುತ್ ನಮ್ಮ ವಿದ್ಯುತ್ ಗ್ರಿಡ್ ಗೆ ಸರಬರಾಜು ಆಗುತ್ತಿದ್ದು ಆ ವಿದ್ಯತ್ ಪ್ರಮಾಣ ಕಡಿಮೆಯೆಂದೇ ಹೇಳಬಹುದು. ಏಕೆಂದರೆ ಪರಮಾಣು ಶಕ್ತಿ ಕೇಂದ್ರಗಳು ಕೇಂದ್ರ ಸರ್ಕಾರದ ಹಿಡಿತದಲ್ಲಿರುವುದರಿಂದ ಅದರಿಂದ ಉತ್ಪತ್ತಿಯಾಗುವ ವಿದ್ಯುತ್ ಅನ್ಯ ರಾಜ್ಯಗಳಿಗೂ ಸ್ವಲ್ಪ ಭಾಗ ಸರಬರಾಜು ಮಾಡಿ ಹೆಚ್ಚು ಭಾಗವನ್ನು ನಾವು ಸ್ಥಳಾವಕಾಶ ಕೊಟ್ಟಿರುವುದರಿಂದ ನಮ್ಮ ರಾಜ್ಯಕ್ಕೆ ನೀಡುತ್ತಾರೆ. ನಮ್ಮ ರಾಜ್ಯದಲ್ಲಿ ಕೈಗಾ ಎಂಬಲ್ಲಿ ಪರಮಾಣು ವಿದ್ಯುತ್ ಕೇಂದ್ರವಿದ್ದು ಅದರಿಂದ ನಮ್ಮ ರಾಜ್ಯಕ್ಕೆ ಬರುತ್ತಿರುವ ವಿದ್ಯುತ್ ಪ್ರಮಾಣ ತುಂಬಾ ಕಡಿಮೆ.

ಇನ್ನು ನೈಸರ್ಗಿಕ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಕೇಂದ್ರಗಳು ನಮ್ಮಲ್ಲಿ ಇಲ್ಲ ಏಕೆಂದರೆ ಈ ಅನಿಲ ಪೆಟ್ರೋಲ್ ಬಾವಿಯಲ್ಲಿ ಮೇಲ್ಪದರವಾಗಿ ಸಿಗುವ ಅನಿಲ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಉತ್ಪತ್ತಿ ಮಾಡಲಾಗುತ್ತಿಲ್ಲದ ಕಾರಣ ಈ ಅನಿಲ ನಮ್ಮಲ್ಲಿ ದೊರೆಯುತ್ತಿಲ್ಲ. ಆದರೆ ಇದನ್ನು ಬೇರೆ ಪ್ರದೇಶಗಳಿಂದ ಮತ್ತು ಹೊರ ದೇಶದಿಂದ ಪಡೆದು ವಿದ್ಯುತ್ ಸ್ಥಾವರ ಸ್ಥಾಪಿಸಲು ಪ್ರಯತ್ನಗಳು ನಡೆಯುತ್ತಿವೆ.

ನಮ್ಮ ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಸುಮಾರು ಏಳು ಸಾವಿರ ಮೆಗಾವ್ಯಾಟ್ ನಷ್ಟಿದೆ. ಆದರೆ ಉತ್ಪತ್ತಿ ಸರಿ ಸುಮಾರು ಆರು ಸಾವಿರ ಮೆಗಾವ್ಯಾಟ್. ಕೊರತೆ ಸಾವಿರ ಮೆಗಾವ್ಯಾಟ್ ಆಗುತ್ತದೆ. ಈ ಕೊರತೆ ತುಂಬಲು ನಾವು ಅನ್ಯ ಮೂಲಗಳಿಗೆ ಹೋಗಬೇಕಾದದ್ದು ಅನಿವಾರ್ಯ. ಅದು ಬೇಸಿಗೆಯಲ್ಲಿ ಮಳೆ ಇಲ್ಲದೆ ಇರುವಾಗರೈತರು ನೀರಾದರಿ ಪಂಪ್ಸೆಟ್ ಬಳಸುವುದು ಮನೆಯಲ್ಲಿ ಫ್ಯಾನ್ ಮತ್ತು ಕೂಲರ್ ಬಳಸುವುದರಿಂದ ವಿದ್ಯುತ್‌ನ ವಿಪರೀತ ಬೇಡಿಕೆ ಇರುತ್ತದೆ.

1. ಕೆಲವು ಕೈಗಾರಿಕೆಗಳು ಡೀಸೆಲ್ ಜನರೇಟರ್ ಸ್ಥಾಪಿಸಿದ್ದು ಅದರಿಂದ ನಮ್ಮ ಬಳಕೆಗೆ ಮೀರಿ ಉತ್ಪತ್ತಿಯಾಗುವ ವಿದ್ಯುತ್ತನ್ನು ಬೇರೆಯವರಿಗೆ ಮಾರುತ್ತಾರೆ. ಇದರ ಬೆಲೆ ದುಬಾರಿಯಾಗಿರುತ್ತದೆ. ಜಲ ವಿದ್ಯುತ್‌ನಿಂದ ಉತ್ಪತ್ತಿಯಾಗುವ ವಿದ್ಯುತ್ ಪ್ರತೀ ಯೂನಿಟ್‌ಗೆ ಸುಮಾರು 2 ರೂಪಾಯಿಯಾದರೆ, ಕಲ್ಲಿದ್ದಲಿನಿಂದ ಉತ್ಪತ್ತಿಯಾಗುವ ವಿದ್ಯುತ್ ಸುಮಾರು 4 ರೂಪಾಯಿ ಮತ್ತು ಡೀಸೆಲ್ ನಿಂದ ಉತ್ಪತ್ತಿಯಾಗುವ ವಿದ್ಯುತ್‌ಗೆ ಸರಿ ಸುಮಾರು 7 ರೂಪಾಯಿ ಬೀಳುತ್ತದೆ. ಹೀಗಾಗಿ ಡೀಸೆಲ್ ವಿದ್ಯುಜ್ಜನಕದಿಂದ ಉತ್ಪಾದಿಸುವ ವಿದ್ಯುತ್ ಖರೀದಿಸಿ ಜನ ಬಳಕೆಗೆ ನೀಡಿದರೆ ವಿದ್ಯುತ್ ದರ ಹೆಚ್ಚಿಸಬೇಕಾಗುತ್ತದೆ. ಈಗಾಗಲೇ ರೈತರಿಗೆ ಉಚಿತ ವಿದ್ಯುತ್ ನೀಡುತ್ತೇವೆಂದು ವಾಗ್ದಾನ ಮಾಡಿ ಆರಿಸಿ ಬಂದ ಸರ್ಕಾರ ಈ ರೀತಿ ಬೆಲೆ ಹೆಚ್ಚಿಸಿ ಇತರೆ ಗ್ರಾಹಕರ ಮೇಲೆ ಹಾಕಿದರೆ ಈಗಾಗಲೇ ದುಬಾರಿ ಬೆಲೆ ನೀಡುತ್ತಿರುವ ರೈತಾಪಿವರ್ಗ ಬಿಟ್ಟು ಉಳಿದ ಗ್ರಾಹಕರು ಪ್ರತಿಭಟಿಸುತ್ತಾರೆ.

2. ಸೌರಶಕ್ತಿಯು ಸೂರ್ಯನಿಂದ ನಿರಂತರವಾಗಿ ಅನಿಯಮಿತವಾಗಿ ದೊರೆಯುವುದರಿಂದ ಅದರ ಬಳಕೆಗೆ ನಾವು ಹಣ ನೀಡಬೇಕಾಗಿಲ್ಲ. ಸೌರಶಕ್ತಿಯನ್ನು ಸಮರ್ಪಕವಾಗಿ ಬಳಸುವುದು ಬಹಳ ಅಗತ್ಯವಾಗಿದೆ. ಈಗಾಗಲೇ ನೀರು ಕಾಯಿಸುವ ವ್ಯವಸ್ಥೆಗೆ ಸೌರಶಕ್ತಿಯನ್ನು ಸಮರ್ಪಕವಾಗಿ ಸಾಮಾನ್ಯ ಜನ ಅದರಲ್ಲೂ ಪಟ್ಟಣದ ಜನರು ಬಹುತೇಕ ಬಳಸುತ್ತಿದ್ದಾರೆ ಹಾಸ್ಟೆಲ್‌ಗಳಲ್ಲಿ, ಕಾರ್ಖಾನೆಗಳಲ್ಲಿ ನೀರು ಕಾಯಿಸುವ ವ್ಯವಸ್ಥೆಗಾಗಿ ಸೌರಶಕ್ತಿಯನ್ನು ಬಳಸಲಾಗುತ್ತಿದೆ. ಸೌರಶಕ್ತಿಯಿಂದ ವಿದ್ಯುತ್ ಉತ್ಪಾದಿಸುವಲ್ಲಿ ಅಷ್ಟೊಂದು ಪ್ರಗತಿ ಸಾಧಿಸಿಲ್ಲ. ಕಾರಣ ಇದಕ್ಕಾಗಿ ಬಳಸುವ ಸೋಲಾರ ಪ್ಯಾನೆಲ್ ತುಂಬಾ ದುಬಾರಿ. ಹೀಗಾಗಿ ಕೇವಲ ಸಿಗ್ನಲ್ ವ್ಯವಸ್ಥೆ, ಟೆಲಿಫೋನ್ ಎಕ್ಸ್‌ಚೇಂಜ್ ವ್ಯವಸ್ಥೆ, ಮನೆಯಲ್ಲಿ ಒಂದು ಅಥವಾ ಎರಡು ಬಟ್ಟೆ ಹಾಕಿಕೊಳ್ಳುವ ವ್ಯವಸ್ಥೆಗೆ ಬಳಸಲಾಗುತ್ತಿದೆ. ಇಡೀ ಮನೆಗೆ ಬೇಕಾದ ವಿದ್ಯುತ್ ಒದಗಿಸಲಾಗಲೀ ಅಥವಾ ಒಂದು ಕಾರ್ಖಾನೆ ನಡೆಸಲು ಬೇಕಾದ ವಿದ್ಯುತ್ ಒದಗಿಸುವಲ್ಲಿ ಸಫಲವಾಗಿಲ್ಲ. ಇತ್ತೀಚಿಗೆ ಸೋಲಾರ್ ಕಾರುಗಳು, ಸೋಲಾರ್ ಪಂಪುಗಳು ನಿರ್ಮಿತವಾಗಿದ್ದರೂ ಅವುಗಳ ದುಬಾರಿ ಬೆಲೆಯಿಂದ ಸಾಮಾನ್ಯಜನರ ಬಳಕೆಗೆ ಲಭ್ಯವಾಗಿಲ್ಲ.

3. ಗಾಳಿಯಿಂದ ಶಕ್ತಿ ಪಡೆಯುವುದು:ಗಾಳಿಯನ್ನು ವಿದ್ಯುತ್ ಉತ್ಪಾದನೆಗೆ ಬಳಸುವುದರಿಂದ ಇದುಕೂಡ ಸೌರಶಕ್ತಿಯ ರೀತಿ ಅನಿಯಮಿತವಾಗಿ ದೊರೆಯುತ್ತದೆ. ಬಳಕೆಗೆ ಹಣವನ್ನು ನೀಡಬೇಕಾಗಿಲ್ಲ. ಗಾಳಿಯು ವೇಗವಾಗಿ ಬೀಸುವ ಕಡೆ ಎತ್ತರ ಪ್ರದೇಶದಲ್ಲಿ ಗಾಳಿ ಯಂತ್ರವನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದಿಸಲು ಬಳಕೆ ಮಾಡಲಾಗುತ್ತಿದೆ.

4. ಜೈವಿಕ ಅನಿಲದಿಂದ ಶಕ್ತಿ : ಜೈವಿಕ ಅನಿಲದಿಂದ ಎರಡು ರೀತಿಯಲ್ಲಿ ಉರುವಲು ಶಕ್ತಿಯನ್ನು ಪಡೆಯಬಹುದು.

VOLUME - 02 | ISSUE -02 | JULY 2026

# ವಿದ್ಯುತ್ ಕೊರತೆಯಾದರೆ ನಮ್ಮ ಪಾತ್ರವೇನು?

1. ಗೋಬರ್‌ಗ್ಯಾಸ್‌ನಿಂದ & 2. ನಾವು ಕಸವಾಗಿ ಬಿಸಾಡು 5 ವಸ್ತುಗಳಿಂದ

**1. ಗೋಬರ್‌ಗ್ಯಾಸ್‌ನಿಂದ :**

ಭಾರತದಲ್ಲಿ ಇದು ಹೆಚ್ಚು ಬಳಕೆಯಲ್ಲಿದೆ. ಏಕೆಂದರೆ ನಮ್ಮ ದೇಶದಲ್ಲಿ ಹೆಚ್ಚು ಹಸು ಎಮ್ಮೆ ಸಾಕಲಾಗುತ್ತಿದೆ. ಪ್ರಾಣಿಗಳ ಸಗಣಿ ಮತ್ತು ಮನುಷ್ಯರ ಮಲಮೂತ್ರವನ್ನು ಕೊಳೆಸುವುದರಿಂದ ಮೀಥೇನ್ ಅನಿಲ ಬಿಡುಗಡೆಯಾಗುತ್ತದೆ. ಇದು ಬೆಂಕಿಯಲ್ಲಿ ಬೇಗ ದಹಿಸಿ ಶಾಖ ನೀಡುತ್ತದೆ. ಈ ತತ್ವದಿಂದ ಬಹುತೇಕ ದೊಡ್ಡ ದೊಡ್ಡ ರೈತಾಪಿ ಮನೆಯಲ್ಲಿ ದನಗಳ ಸಗಣಿಯಿಂದ ಗೋಬರ್ ಗ್ಯಾಸ್ ಉತ್ಪತ್ತಿಸಿ ಅದನ್ನು ಅಡುಗೆ ಇಂಧನವಾಗಿ ಬಳಸಲಾಗುತ್ತಿದೆ. ಇದನ್ನು ಸಹಕಾರಿ ತತ್ವದ ಆಧಾರದ ಮೇಲೆ ಈಗಿನ ಎಲ್ಲಾ ಜನರು ಒಂದೇ ಕಡೆ ಸಗಣಿ ಹಾಕಿ ಒಂದು ದೊಡ್ಡ ಗೋಬರ್ ಗ್ಯಾಸ್ ಅನಿಲ ಯಂತ್ರ ಸ್ಥಾಪಿಸಿ ಅದರಿಂದ ಬರುವ ಅನಿಲವನ್ನು ನಲ್ಲಿ ನೀರಿನ ಕೊಳಾಯಿಗಳಂತೆ ಎಲ್ಲರ ಮನೆಗೂ ಸರಬರಾಜು ಮಾಡಬಹುದು. ಅನಿಲ ಉತ್ಪಾದನೆ ಹೆಚ್ಚಾದರೆ ಅದರಿಂದ ವಿದ್ಯುತ್ ಕೂಡ ಉತ್ಪಾದಿಸಬಹುದು. ಇದಲ್ಲದೆ ಸಮುದ್ರದ ಅಲೆಗಳಿಂದ, ಭೂಮಿಯೊಳಗಡೆ ಇರುವ ಉಷ್ಣ ಶಕ್ತಿಯಿಂದಲೂ ಕೂಡ ವಿದ್ಯುತ್ ಉತ್ಪತ್ತಿ ಮಾಡಬಹುದಾಗಿದೆ. ಇದುವರೆಗು ನಾವು ನಮ್ಮ ಬಳಕೆಯ ಬಹುಭಾಗ ವಿದ್ಯುತ್ ಉತ್ಪಾದನೆಗೆ ಪಳೆಯುಳಿಕೆ ಇಂಧನಗಳಾದ ಪೆಟ್ರೋಲಿಯಂ, ಕಲ್ಲಿದ್ದಲು ಮತ್ತು ನೀರು ಹಾಗೂ ಪರಮಾಣು ಶಕ್ತಿಯ ಇಂಧನ ಯುರೇನಿಯಮ್ ಬಳಸಲಾಗುತ್ತಿದೆ. ಪಳೆಯುಳಿಕೆ ಇಂಧನಗಳ ಬಳಕೆ ಇತ್ತೀಚಿಗೆ ಬಹಳ ಏರಿಕೆಯಾಗಿದ್ದು, ಅವುಗಳ ಮೀಸಲು (ರಿಸರ್ವ್) ಬಹಳ ಕಡಿಮೆಯಾಗುತ್ತಿದೆ. ಇವು ಕೆಲವೇ ವರ್ಷಗಳಲ್ಲಿ ಮುಗಿಯುವ ಸಂಭವವಿದೆ. ಈಗಾಗಲೇ ಹೇಳಿದ ಹಾಗೆ ಮಳೆ ಪ್ರಮಾಣ ಕಡಿಮೆಯಾಗಿದ್ದು ನೀರಿನ ಲಭ್ಯತೆ ಕೂಡ ಕಡಿಮೆಯಾಗಿದೆ. ಪರಮಾಣು ಶಕ್ತಿ ಇಂಧನ ನಮ್ಮಲ್ಲಿ ಹೇರಳವಾಗಿಲ್ಲ. ಅದನ್ನು ಅಮೇರಿಕಾ, ರಷ್ಯಾ, ಫ್ರಾನ್ಸ್ ಮುಂತಾದ ದೇಶಗಳಿಂದ ಖರೀದಿಸಲಾಗುತ್ತಿದೆ. ಅದು ಕೂಡ ಸೀಮಿತ ಪ್ರಮಾಣದಲ್ಲಿರುವುದರಿಂದ ವಿಶ್ವದಲ್ಲಿ ಅದರ ಬಳಕೆ ಪ್ರಮಾಣವು ಹೆಚ್ಚುತ್ತಿದ್ದು ಕೆಲವೇ ವರ್ಷಗಳಲ್ಲಿ ಮುಗಿಯುವ ಸಂಭವವಿದೆ. ನಮ್ಮಲ್ಲಿ ಪೆಟ್ರೋಲಿಯಂ ಉತ್ಪಾದಿಸುವ ಬಾವಿಗಳು ಇಲ್ಲದಿರುವುದರಿಂದ ನೈಸರ್ಗಿಕ ಅನಿಲ ನಮ್ಮಲ್ಲಿ ಸಿಗುವುದು ದುರ್ಲಭ. ಈ ಕಾರಣದಿಂದ ನೈಸರ್ಗಿಕ ಅನಿಲ ಆಧಾರಿತ ವಿದ್ಯುತ್ ಉತ್ಪಾದನ ಘಟಕಗಳನ್ನು ಸ್ಥಾಪಿಸುವುದು ಬಹು ಕಷ್ಟ ಸಾಧ್ಯವೇ ಸರಿ.

ಹೀಗಾಗಿ ದಿನದಿಂದ ದಿನಕ್ಕೆ ಜನಸಂಖ್ಯೆ ಏರಿಕೆಯಾಗಿ ವಿದ್ಯುತ್ ಹೆಚ್ಚಾಗುತ್ತಿದ್ದು ಪಾರಂಪರಿಕ ವಿದ್ಯುತ್ ಉತ್ಪಾದನಾ ಮೂಲಗಳು ಬರಿದಾಗುತ್ತಿರುವುದರಿಂದ ಅನ್ಯಮಾರ್ಗವಿಲ್ಲದೆ ಪರ್ಯಾಯ ಮೂಲಗಳಾದ ಸೌರಶಕ್ತಿ, ಜೈವಿಕಇಂಧನ, ಗಾಳಿ ಮೂಲಗಳ ಮೊರೆ ಹೋಗುವುದು ಅನಿವಾರ್ಯವಾಗಿದೆ.

ಇದರ ಜೊತೆಗೆ ಇರುವ ವಿದ್ಯುತ್ತದನ್ನು ಹಾಳಾಗದ ಹಾಗೆ ನಾವು ಬಳಕೆ ಮಾಡುವುದು ನಮ್ಮೆಲ್ಲರಕರ್ತವ್ಯವಾಗಿದೆ.

**ಮನೆಯಲ್ಲಿ ವಿದ್ಯುತ್ ಬಳಕೆ ಕಡಿಮೆ ಮಾಡುವ ವಿಧಾನಗಳು :**

1. ಅಗತ್ಯವಿದ್ದಾಗ ಮಾತ್ರ ವಿದ್ಯುತ್ ದೀಪಗಳನ್ನು ಉರಿಸಿ, ಇಲ್ಲದಿದ್ದಾಗ ಸ್ವಿಚ್ ಆಫ್ ಮಾಡಿರಿ.
2. ಸಾಮಾನ್ಯ ವಿದ್ಯುತ್ ಬಲ್ಬ್ ಮತ್ತು ಟ್ಯೂಬ್ ಲೈಟ್ ಗಳ ಬದಲಾಗಿ ಸಿ.ಎಫ್.ಎಲ್ ಅಥವಾ ಎಲ್.ಇ.ಡಿ. ಬಲ್ಬುಗಳನ್ನು ಬಳಸಿ, ಇವು ಕಡಿಮೆ ವಿದ್ಯುತ್ ಉಪಯೋಗಿಸಿ ಹೆಚ್ಚು ಬೆಳಕನ್ನು ಕೊಡುತ್ತವೆ.
3. ಮನೆಯೊಳಗೆ ಬೀಳುವ ಸೂರ್ಯನ ಬೆಳಕನ್ನು ಗರಿಷ್ಟವಾಗಿ ಉಪಯೋಗಿಸಿ, ವಿದ್ಯುತ್ ದೀಪಗಳ ಬಳಕೆ ಕಡಿಮೆ ಮಾಡಿ.
4. ಟ್ಯೂಬ್ ಲೈಟ್‌ಗೆ ಕೆಪಾಸಿಟರ್, ಫ್ಯಾನ್ ಗೆ ರೆಗ್ಯುಲೇಟರ್ ಬಳಸಿ.
5. ವಿದ್ಯುತ್ ಒಲೆ, ಇಸ್ತ್ರಿಪೆಟ್ಟಿಗೆ, ನೀರು ಕಾಯಿಸುವ ಬಾಯ್ಲರ್ ಸಿಮ್ಮರ್ ಸ್ವಾಟ್ ಬಳಸಿ,
6. ಸೌರಶಕ್ತಿಯಿಂದ ನೀರನ್ನು ಕಾಯಿಸುವ ಮತ್ತು ಅಡುಗೆ ಮಾಡುವ ಉಪಕರಣ ಬಳಸಿ.
7. ರೆಫ್ರಿಜಿರೇಟರ್ ಬಾಗಿಲನ್ನು ಪದೇ ಪದೇ ತೆಗೆಯಬೇಡಿ. ಅದರಲ್ಲಿ ಇಡುವ ವಸ್ತುವನ್ನು ಸಾಮಾನ್ಯ ತಾಪಕ್ಕೆ ತಂದು
8. ವಿದ್ಯುತ್ ದೀಪದ ಮೇಲಿರುವ ಧೂಳು ಒರೆಸಿ ಹೆಚ್ಚು ಪ್ರಕಾಶ ಪಡೆಯಿರಿ.
9. ಗೋಡೆಗಳಿಗೆ ಬೆಳಕನ್ನು ಪ್ರತಿ ಫಲಿಸುವ ಸಾಮಾನ್ಯ ಬಣ್ಣ ಬಳಸಿ.
10. ಟಿ.ವಿ. ಸ್ವಿಚ್ ಆಫ್ ಮಾಡಿದಮೇಲೆ ವೋಲ್ಟೇಜ್ ಸ್ಟೆಬಿಲೈಜರ್ ಕೂಡ ಬಂದ್ ಮಾಡಿ. ಮೊಬೈಲ್ ಚಾರ್ಜ್ ಮಾಡಿದ ಮೇಲೆ ಸ್ವಿಚ್ ಆಫ್ ಮಾಡಿ.

# ವಿದ್ಯುತ್ ಕೊರತೆಯಾದರೆ ನಮ್ಮ ಪಾತ್ರವೇನು?

**ವಾಣಿಜ್ಯ ಮತ್ತು ಕೈಗಾರಿಕೆಗಳಲ್ಲಿ ವಿದ್ಯುತ್ ಉಳಿಸುವ ವಿಧಾನಗಳು :**

1. ಅಲಂಕಾರಿಕ ದೀಪಗಳನ್ನು ಕಡಿಮೆ ಮಾಡಿ.
2. ಕೂಲರ್ ಮತ್ತು ಏರ್ ಕಂಡೀಷನರ್ ಅಗತ್ಯವಿದ್ದಾಗ ಮಾತ್ರ ಬಳಸಿ.
3. ಕಟ್ಟಡದಲ್ಲಿ ಜನರಿಲ್ಲದಿದ್ದಾಗ ರಕ್ಷಣಾದೀಪ ಹೊರತು ಬೇರೆ ದೀಪ ಆರಿಸಿ.
4. ಕೈಗಾರಿಕೆಯಲ್ಲಿ ಅಥವಾ ಕೃಷಿಯಲ್ಲಿ ಅಗತ್ಯವಾದ ಪ್ರಮಾಣದ ಮೋಟಾರ್ ಮಾತ್ರ ಬಳಸಿ.
5. ಮೋಟಾರುಗಳಿಗೆ ಕೆಪಾಸಿಟರ್ ಬಳಸಿ.
6. ಮೋಟಾರುಗಳು ಯಂತ್ರಗಳಿಗೆ ಹತ್ತಿರವಿರಲಿ, ಬೇರಿಂಗ್ ಸುಸ್ಥಿತಿಯಲ್ಲಿರಲಿ.
7. ನೀರೆತ್ತುವ ಪೈಪ್ನಲ್ಲಿ ಸಕ್ಷನ್ ಪೈಪ್ ಎತ್ತರ ಕಡಿಮೆ ಮಾಡಿ ಮತ್ತು ಸೂಕ್ತವಾದ ಪೈಪ್ ಗಾತ್ರ ಬಳಸಿ.
8. ಪೈಪುಗಳಿಗೆ ತಿರುವು ಕಡಿಮೆ ಮಾಡಿ, ಡೆಲಿವರಿ ಪೈಪ್ ನ ಎತ್ತರಕಡಿಮೆ ಮಾಡಿ.

ಈ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡರೆ ಸಾಕಷ್ಟು ವಿದ್ಯುತ್ ಉಳಿಸಬಹುದು. ಅದರ ಬೇಡಿಕೆಯನ್ನು ತಗ್ಗಿಸಬಹುದು. 'ಒಂದು ಯೂನಿಟ್ ವಿದ್ಯುತ್ ಉಳಿಸಿದರೆ ಒಂದು ಯೂನಿಟ್ ಉತ್ಪಾದಿಸಿದಂತೆ' ಎಂಬ ವಾಕ್ಯ ಸದಾ ನಿಮ್ಮ ಗಮನದಲ್ಲಿರಲಿ.ಒಂದು ಸಂತೋಷದ ವಿಷಯವೇನೆಂದರೆ ಇತ್ತೀಚೆಗೆ ಕರ್ನಾಟಕ ಸರ್ಕಾರವು ತುಮಕೂರು ಜಿಲ್ಲೆ ಪಾವಗಡದಲ್ಲಿ ಏಷಿಯಾದಲ್ಲೇ ಅತೀ ದೊಡ್ಡದಾದ ಸೌರವಿದ್ಯುತ್ ಸ್ಥಾವರ ಸ್ಥಾಪಿಸಿ ಮೈಲಿಗಲ್ಲು ಸಾಧಿಸಿದ್ದಾರೆ. ಬೇಸಿಗೆ ಕಾಲದಲ್ಲಿ ಆಗುತ್ತಿದ್ದ ವಿದ್ಯುತ್ ಕೊರತೆ ಈ ಸೌರವಿದ್ಯುತ್ ವ್ಯವಸ್ಥೆಯಿಂದ ಸ್ವಲ್ಪ ಪಾರಾಗಿದೆ.



**ಎಂ. ಕೆ .ರಾಮಸ್ವಾಮಿ**
**ಶೈಕ್ಷಣಿಕ ನಿರ್ದೇಶಕರು**
**ವಿದ್ಯಾ ಸಂಸ್ಕಾರ್ ಶಿಕ್ಷಣ ಸಂಸ್ಥೆ, ಬೆಂಗಳೂರು**

VOLUME - 02 | ISSUE -02 | JULY 2026

UPASANA VSPUC

# ವಿಶ್ವ ಪರಿಸರ ದಿನಾಚರಣೆ

ವಿಶ್ವ ಪರಿಸರ ದಿನಾಚರಣೆ ಹಸಿರೇ ಉಸಿರು ಜಗದ ಜೀವಕ್ಕೆ ದಿನಾಂಕ 5 ಜೂನ್ 2026 ನೇ ಶುಕ್ರವಾರದಂದು ನಮ್ಮ ಕಾಲೇಜಿನಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು ಬೆಳಿಗ್ಗಿನ ಪ್ರಾರ್ಥನಾ ಸಭೆಯಲ್ಲಿ ನಮ್ಮ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಾದ ಧನು ಎಂ, ಮನೀಶ್ ಕುಮಾರ್ ಹಾಗೂ ನಯನ್ ಇವರು ಕನ್ನಡ, ಹಿಂದಿ ಹಾಗೂ ಇಂಗ್ಲೀಷ್ ನಲ್ಲಿ ವಿಶ್ವ ಪರಿಸರ ದಿನಾಚರಣೆಯ ಬಗ್ಗೆ ಮಾತನಾಡಿದರು.




**" ಹಸಿರೇ ಉಸಿರು ಜಗದ ಜೀವಕ್ಕೆ**
**ಮರವೇ ಆಸರೆ ನಾಳೆಯ ಬಾಳಿಗೆ**
**ನಿಸರ್ಗ ದೇವಿಯ ಮಡಿಲನ್ನು ಕಾಯೋಣ**
**ಗಿಡ ಮರ ಬೆಳೆಸಿ ಧರಣಿಯ ಉಳಿಸೋಣ**
**ಪ್ಲಾಸ್ಟಿಕ್ ಮಹಾಮಾಯ ಓಡಿಸೋಣ**
**ಸ್ವಚ್ಛ ಸುಂದರ ಪ್ರಕೃತಿಯ ಸೃಷ್ಟಿಸೋಣ"**



ಎನ್ನುವ ಕವನದೊಂದಿಗೆ ಮಾತನಾಡುತ್ತಾ ಕಾಡುಗಳನ್ನು ಕಡೆಯುವುದನ್ನು ನಿಲ್ಲಿಸಿ ಗಿಡಮರಗಳನ್ನು ನೆಟ್ಟು ಪೋಷಿಸುವಂತೆ ಜನರನ್ನು ಪ್ರೇರೇಪಿಸಬೇಕು ಎಂದರು.

ಮನೀಶ್ ಕುಮಾರ್ ಅವರು ಮಾತನಾಡುತ್ತಾ ಪ್ರಕೃತಿಯೆಂದರೆ ಕೇವಲ ನಮ್ಮ ಸುತ್ತಮುತ್ತಲಿನ ನದಿ ಪರ್ವತ ಮತ್ತು ಜೀವಜಂತುಗಳಲ್ಲಿ ಅದು ನಮ್ಮ ಜೀವನದಾರ ಶುದ್ಧ ಗಾಳಿ ಸ್ವಚ್ಛನೀರು ಫಲವತ್ತಾದ ಭೂಮಿ ಮತ್ತು ಜೀವನಕ್ಕೆ ಬೇಕಾಗುವ ಎಲ್ಲಾ ಅವಶ್ಯಕತೆಗಳು ಪ್ರಕೃತಿಯಿಂದಲೇ ಸಿಗುತ್ತದೆ ಆದ್ದರಿಂದ ಅದನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು ನಯನ್ ಅವರು ಮಾತನಾಡುತ್ತಾ ವಿಶ್ವ ಪರಿಸರ ದಿನ ಯಾವಾಗ ಪ್ರಾರಂಭವಾಯಿತು ಅದರ ಮಹತ್ವ ಪ್ರಾಮುಖ್ಯತೆ ಪರಿಸರ ರಕ್ಷಣೆಯ ಕ್ರಮಗಳ ಬಗ್ಗೆ ತಿಳಿಸಿದರು.



VOLUME - 02| ISSUE -02 | JULY 2026

# DIGITAL SKILLS FOR SMART COMMERCE PROFESSIONALS

## Bridging the Digital Divide: Empowering Students with Future-Ready Skills



The Digital Skills Training Program commenced on 17 June 2026 at Vidya Sanskaar Pre-University College with the objective of equipping students with essential digital competencies for academic success, career readiness, and everyday life in a technology-driven world.

The training program included hands-on sessions on Microsoft Word, Microsoft Excel, Microsoft PowerPoint, Google Workspace, Internet and Email, Cyber Safety, Artificial Intelligence (AI) basics, Resume Preparation, and Digital Communication. The sessions combined practical demonstrations with interactive activities, enabling students to learn by doing and apply their knowledge confidently.



Students actively participated throughout the program, showing great enthusiasm and interest in developing their digital competencies. The training enhanced their technical knowledge, problem-solving abilities, communication skills, and confidence in using digital tools for both academic and professional .

## Student Feedback

The response from students was overwhelmingly positive. Participants appreciated the practical, hands-on approach and the interactive learning environment. Many students shared that the program improved their confidence in using digital tools and prepared them for higher education and future career opportunities. They also expressed their interest in attending more such skill-development programs in the future.



The Digital Skills Training Program concluded successfully, reflecting the college's commitment to fostering digital literacy and empowering students with future-ready skills. Such initiatives inspire students to embrace technology, innovate, and become confident lifelong learners.

"Digital skills are the foundation for success in today's connected world, empowering students to learn, create, and lead with confidence."

VOLUME - 02 | ISSUE -02 | JULY 2026

# TIME MANAGEMENT

Have you ever wondered why some people always finish their work on time while others struggle to complete their tasks?

**The answer is simple—Time management.**

Time management is the skill of planning and organizing our time wisely. It helps us complete our work efficiently and achieve success in life.

Time is the most valuable gift we have. Once it is gone, it can never be brought back. Everyone has the same 24 hours in a day, but the difference lies in how we use those hours. People who value their time and use it wisely are more likely to succeed, while those who waste it often miss important opportunities.

Good time management starts with proper planning. We should prepare a daily schedule and make a list of the tasks we need to complete. It is always better to finish the most important work first. We should also avoid spending too much time on mobile phones, social media, television, or other unnecessary activities that distract us from our goals.

Time management does not mean being busy all the time. Instead, it means using our time wisely and maintaining a balance between studies, work, rest, and recreation. It helps us stay organized, reduces stress, improves our productivity, and gives us enough time for our family, friends, and hobbies.

Students who manage their time well can complete their homework on time, prepare for exams without stress, and enjoy better academic performance. Developing this habit from an early age helps build discipline, confidence, and responsibility.

Time never waits for anyone. Every moment is precious, and once it is lost, it cannot be recovered. Therefore, we should value every minute and make the best use of our time.

In conclusion, time management is the key to a successful and happy life.As the famous proverb says, "Time and tide wait for none."



**Lavanya D H**
**II PU Commerce 'B'**

# DISCIPLINE

**"Suffer the pain of Discipline, or suffer the path of regret",**

Discipline plays a crucial role in a student's life shaping their character and academic sucess. discipline in student's life is very necessary. We cannot even imagine a successful students who does not follow discipline in his life. In the very early stage of life when a students joined the school the main priority is given to discipline. It is not a students should incalucate the discipline when joined the school. but it should earned from the home.

Discipline is not only following a set of rules and regulations, but it is all about cultivating. self-control, responsibility and respect to build our character.

When we have discipline in your life you can make small sacrifices in the present for a better Life in the future. Discipline creates habits. Habits make routines, and routines become ours discipline life.

Discipline is the bridge between goals and accomplishment; hence it is the key to sucess in our life.

Discipline also helps students to stay stress-free and also prevents them from falling into depression. Discipline in Student's life attracte all rights things and because of this students gain success in each field of their life

**"Discipline is rarely enjoyable,**

**but almost always profitable".**

Discipline is very important as seen at both levels, individudly and colleting for society It helps people to showcase their attitude. and represent their character and thinking. Both the body and the mind are honed by discipline, discipline helps to address individual problems and develop a society that is both peaceful and respectful therefore, it would be right to say that without discipline there is no life at all.

**"Discipline is soul of an army. It makes small number formidable procures success to the weak and esteem to all".**



**Prerana R Gowda**
**I PU Commerce 'B'**

# Gallery- The Frames of Glory...












# Gallery- The Frames of Glory...






















VOLUME - 02 | ISSUE -02 | JULY 2026

# Gallery- The Frames of Glory…

















# Gallery- The Frames of Glory...












**VOLUME - 02 | ISSUE -02 | JULY 2026**

# Contact Us

**Vidya Sanskaar Pre-University College**

**Machohalli Gate, Magadi Main Road, Bengaluru-91**

**We Welcome Your Suggestions!**

**Have feedback, ideas, or suggestions for the next volume?**

**Feel free to reach out to us at:**

**Phone: 080-35612881 to 99 (19 lines)**

**E-mail: upasana@vidyasanskaar.edu.in**